(ಶ್ರೀ ಎಚ್. ಎಂ. ಚನ್ನಬಸಪ್ಪ.)

6. Constructing a bridge at mile 28/8 of H.M.F. Road.—ಟೆಂಡರುಗಳು ಸರ್ಕಾರದ ಮುಂದೆ ಇವೆ.

7. Constructing a bridge at mile 23/2 of Tornagal-Sandur Road.—ಅಂದಾಜು ಇನ್ನೂ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಕೊಟ್ರ ಬಸವನಗೌಡ.—ಹಿಂದೆ ಮುಖ್ಯ ಮಂತ್ರಿಗಳು ಬಳ್ಳಾರಿಗೆ ಬಂದಿದ್ದಾಗ ಇವುಗಳನ್ನೆಲ್ಲ ಜಾಗ್ರತೆಯಾಗಿ ಪೂರ್ಣ ಮಾಡುತ್ತೇವೆಂದು ಹೇಳಿದ್ದರು. ಮೂರು ವರ್ಷಗಳಾದರೂ ಟೆಂಡರ್ call for ಮಾಡುವುದರಲ್ಲೇ ಇದ್ದೇವೆಂದು ಹೇಳಿದರೆ ಹೇಗೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಂಡರುಗಳನ್ನು call for ಮಾಡುವುದು ಮೂರು ವರ್ಷದಿಂದ ಇಲ್ಲ.

ಶ್ರೀ ಬಿ. ರಾಚಯ್ಯ.—ಇಲ್ಲಿ ಹೊಸ ರಸ್ತೆಗಳನ್ನು ಮಾಡುವಾಗ ಯಾವ ಏಜೆನ್ಸಿ ಮುಖಾಂತರ ಮಾಡಿಸುತ್ತಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—Local development worksನಲ್ಲಿ ಕೆಲವು ರಸ್ತೆಗಳಾಗಿವೆ ಮತ್ತು ಪಂಚಾಯಿತಿಗಳಿಗೆ ಗ್ರಾಂಟ್ ಕೊಟ್ಟು ಅವರ ಮೂಲಕ ಕೆಲವು ರಸ್ತೆಗಳು ಆಗಿವೆ.

ಶ್ರೀ ಬಿ. ರಾಚಯ್ಯ.—ಈಗ ಹೊಸರಸ್ತೆಗಳನ್ನು ಮಾಡುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ನಾಲ್ಕನೇ ಒಂದು ಭಾಗ ಕೆಲಸವನ್ನು ಆಯಾ ಗ್ರಾಮದ ಜನಗಳು ಮಾಡಬೇಕೆಂದು ಕಾನೂನು ಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೇ ಪ್ರಕಾರವೇ ಈ ಕೆಲಸ ಕಾರ್ಯಗಳೆಲ್ಲ ನಡೆದಿರತಕ್ಕದ್ದು. ತಮಗೆ ಬೇಕಾದಲ್ಲಿ ಅಂದಾಜು ಎಷ್ಟಕ್ಕೆ ಆಗಿದೆ, ಗ್ರಾಂಟ್ ಎಷ್ಟು, ಪಂಚಾಯಿತಿ ಗ್ರಾಂಟ್ ಎಷ್ಟು ಎಂಬ ವಿವರಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

Markonahalli Sub-Division.

Q.—430. **Sri N. HUCHMASTHY GOWDA** (Huliyurdurga).—

Will the Government be pleased to state :—

(*a*) the cost of work carried out each month from January 1955 to end of January 1956 in Markonahalli Sub-Division, Kunigal Taluk ;

(*b*) the expenditure that is being incurred each month on the establishment of this Sub-Division ;

(*c*) whether it is a fact that a separate special Sub-Division is being formed to execute the work of the Kowdle Bridge which has to be constructed in this Sub-Division ;

(*d*) whether it is not possible to get this Kowdle Bridge work executed by the Markonahalli Sub-Division itself ?

A.—**Sri H. M. CHANNABASAPPA** (Minister for Industries).—

(*a*) and (*b*) *Vide* Statement appended below.

(*c*) Yes.

(*d*) No.

Sl. No.	Month	Cost of work carried out each month.			Establishment Charges		
		Rs.	a.	p.	Rs.	a.	p.
1	January 1955	14,762	9	0	1,756	6	0
2	February 1955	14,116	5	0	1,134	12	0
3	March 1955	20,745	8	0	1,381	14	0
4	April 1955	12,872	1	0	1,366	8	0
5	May 1955	11,867	15	0	1,666	5	0
6	June 1955	16,757	6	0	1,435	12	0
7	July 1955	20,158	0	0	1,441	3	0
8	August 1955	11,806	0	0	1,347	8	0
9	September 1955 ...	9,462	3	0	1,608	10	0
10	October 1955	10,508	6	0	1,761	1	0
11	November 1955 ...	14,280	14	3	1,580	4	0
12	December 1955 ...	16,184	13	0	1,668	6	0
13	January 1956	11,665	7	0	1,472	3	0
	Total ...	1,85,187	7	3	19,620	12	0

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪರಿಶಿಷ್ಟದಲ್ಲಿ ಪ್ರತಿ ತಿಂಗಳಿನಲ್ಲಿಯೂ ಖರ್ಚಾಗಿರುವ ಹಣವನ್ನು ಕೊಡ ರಾಗಿದೆ. ಇದರಲ್ಲಿ asphalting ಮಾಡಿರುವುದು ಕೂಡ ಸೇರಿದೆಯೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾರ್ಕೋನಹಳ್ಳಿ jurisdiction ನಲ್ಲಿ ಆಗಿರುವ ಕೆಲಸಗಳೆಲ್ಲ ಅದರಲ್ಲಿ ಸೇರಿವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಇದರಲ್ಲಿ ಹೆಚ್ಚು ಭಾಗದ ಹಣ ರಸ್ತೆಗಳಿಗಾಗಿ ಖರ್ಚಾಗಿ, ನೀರಾವರಿ ಕೆಲಸಗಳು, restoration of minor tanks ಇವೆಲ್ಲ ಸರಿಯಾಗಿ ನಡೆಯುತ್ತಿಲ್ಲವೆಂದು ಮಾನ್ಯಮಂತ್ರಿಗಳು ಈಚೆಗೆ ಅಲ್ಲಿಗೆ ದಯಮಾಡಿಸಿದ್ದಾಗ ಅವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಸ್ತೆಗಳು, Channel repairs, ಮೊದಲಾದ ಕೆಲಸಗಳೆಲ್ಲವನ್ನೂ ಇದರಲ್ಲಿ ಸೇರಿಸಿಕೊಡಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಾರ್ಕೋನಹಳ್ಳಿ ಸಬ್‌ಡಿವಿಷನ್‌ನಲ್ಲಿರುವ ಕೌಡ್ಲೆ ಸೇತುವೆಯ ಕೆಲಸವನ್ನು ಸದರಿ ಸಬ್‌ಡಿವಿಷ್ ಮುಖಾಂತರ ಮಾಡಿಸುವುದಕ್ಕೆ ಸರ್ಕಾರಕ್ಕೆ ಏನು ಅಡ್ಡಿ ಇತ್ತು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಡ್ಡಿ ಏನೆಂದರೆ ಈ ಸಬ್‌ಡಿವಿಷ್‌ನಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರಿಗೆ outlay ಒಂದನ್ನೇ ನೋಡಿಕೊಳ್ಳುವ ಕೆಲಸವಲ್ಲ, ಅದರ ಜೊತೆಗೆ channel maintain ಮಾಡತಕ್ಕದ್ದು, ಸುಮಾರು 10-12 ಸಾವಿರ ಎಕರೆಗೆ ನೀರನ್ನು distribute ಮಾಡತಕ್ಕದ್ದು, channe ರಿಪೇರಿ ಕೆಲಸ ನೋಡಿಕೊಳ್ಳತಕ್ಕದ್ದು, channel supervision, ಎಲ್ಲರಿಗೂ ನೀರನ್ನು ಸಮರ್ಪಕವಾಗಿ ಒದಗಿಸುವುದರ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದು, ಮತ್ತು ಮೂರು ತರಹ waste-weirಗಳನ್ನು operate ಮಾಡತಕ್ಕದ್ದು, ಬಹಳ ಜವಾಬ್ದಾರಿ ಕೆಲಸ, ಇವುಗಳೆಲ್ಲವೂ ಕೂಡ ಮಾರ್ಕೋನಹಳ್ಳಿ ಸಬ್‌ಡಿವಿಷ್‌ಗೆ ಸೇರಿವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಈಗ ವಿವರಿಸಿದ ಕೆಲಸಗಳೆಲ್ಲವೂ ಆ ಸಬ್‌ಡಿವಿಷ್‌ಗೆ ವರ್ಷವೆಲ್ಲ ಇರುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ಹಂಚಿಕೆಯ ಕೆಲಸ paddy cultivation ಎಲ್ಲಿಯವರೆಗೆ ಆಗುತ್ತದೆಯೋ ಅಲ್ಲಿಯವರೆಗೆ ಇರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಈಗ ಖರ್ಚುಮಾಡತಕ್ಕ ಹಣಕ್ಕಿಂತ ಇನ್ನೂ ಹೆಚ್ಚಿಗೆ ಖರ್ಚಿನ ಕೆಲಸಕಾರ್ಯಗಳನ್ನು ಈ ಸಬ್‌ಡಿವಿಷ್ ಅಧಿಕಾರಿಗಳು ಮಾಡುವುದಕ್ಕಾಗುವುದಿಲ್ಲವೆಂಬುದು ಸರ್ಕಾರದ ಉಚಿತವಾದ ಅಭಿಪ್ರಾಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—Marconahalli jurisdiction ನಲ್ಲಿ ಇನ್ನೂ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡಿಸಲು ಅವಕಾಶವಿದೆ. ಈಗ ಮಂಗಳ ಪ್ರಾಜೆಕ್ಟ್ ಮಂಜೂರಾಗಿದೆ, ಅದಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳು ಆಗಬೇಕಾಗಿರುವುದರಿಂದ ಒಂದು ಸ್ಪೆಷಲ್ ಸಬ್‌ಡಿವಿಷ್ ಇರಬೇಕಾದದ್ದು ಅತ್ಯಾವಶ್ಯಕ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮೊನ್ನೆ ಮಾನ್ಯ ಮಂತ್ರಿಗಳು ಮಾರ್ಕೋನಹಳ್ಳಿಗೆ ದಯಮಾಡಿಸಿದ್ದಾಗ irrigation works ನಲ್ಲಿ ಕೂಡ ಅಲ್ಲಿರುವ Sub-Division Officer ಸಮರ್ಪಕವಾಗಿ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲವೆನ್ನುವ ವಿಷಯ ಅವರ ಗಮನಕ್ಕೆ ಬರಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಗಮನಕ್ಕೆ ಬಂದಿತ್ತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಲ್ಲದೆ ಕೆಲವು ಮುಖ್ಯವಾದ ಕೆಲಸಗಳನ್ನು ಆ ಆಫೀಸರು ಬಂದು ಅನೇಕ ವರ್ಷಗಳಾದರೂ ನೋಡದೆ, ಮಂತ್ರಿಗಳು ಬಂದಾಗಲೇ ಅವುಗಳನ್ನು ನೋಡಿದ್ದು ಎಂಬುದು ತಮ್ಮ ಗಮನಕ್ಕೆ ಬರಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಕಷ್ಟು ಪ್ರಮಾಣದಲ್ಲಿ ಅಲ್ಲಿರುವ ಅಧಿಕಾರಿಗಳು ಗಮನ ಕೊಟ್ಟಿರಲಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಒಂದು ಸಬ್‌ಡಿವಿಷ್‌ನಲ್ಲಿ ಮುಖ್ಯವಾಗಿರತಕ್ಕ ಮಾರ್ಕೋನಹಳ್ಳಿ ಕೆರೆಗೆ ಸಂಬಂಧಿಸಿದ ಅಂಕಿಅಂಶಗಳು ಕೂಡ Executive Engineer ಮತ್ತು Assistant Engineer ಇವರುಗಳಿಗೆ ತಿಳಿದಿರಲಿಲ್ಲವೆನ್ನುವುದು ತಮ್ಮ ಗಮನಕ್ಕೆ ಬರಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರಲ್ಲಿ ಸ್ವಲ್ಪ ರೋಪದೋಷಗಳು ಕಂಡುಬಂದುವು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಆ ಸಬ್‌ಡಿವಿಷ್ ಅಧಿಕಾರಿಗಳ ಮೇಲೆ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಕುಣಿಗರ್ ತಾಲ್ಲೂಕಿನಲ್ಲಿ ಮಾರ್ಕೋನಹಳ್ಳಿ ಪ್ರದೇಶಬಿಟ್ಟರೆ ಉಳಿದ ಕ್ಷೇತ್ರಕ್ಕೆ ಅಸಿಸ್ಟೆಂಟ್ ಇಂಜಿನಿಯರುಗಳು ಯಾರಾರು ಇದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರೆ ಬೇರೆ ಅಸಿಸ್ಟೆಂಟ್ ಇಂಜಿನಿಯರಿದ್ದಾರೆ. ಕೌಡ್ಲೆ ಸೇತುವೆಯ ಕೆಲಸಕ್ಕೆ ಒಬ್ಬ ಅಸಿಸ್ಟೆಂಟ್ ಇಂಜನಿಯರಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಕೌಡ್ಲೆ ಸೇತುವೆ ಕೆಲಸಕ್ಕೆ ಒಬ್ಬ ಅಸಿಸ್ಟೆಂಟ್ ಇಂಜಿಯರಿದ್ದರೆ, ಕುಣಿಗಲ್ ತಾಲ್ಲೂಕಿಗೆ ಒಟ್ಟು ಮೂರು ಜನ ಅಸಿಸ್ಟೆಂಟ್ ಇಂಜಿನಿಯರ್‌ಗಳು ಇದ್ದಹಾಗಾಯಿತು ಅಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾಲ್ಲೂಕಿನ ಮೇಲೆ ಮತ್ತು ವಿಸ್ತೀರ್ಣದ ಮೇಲೆ ಅವಲಂಬಿಸುವುದಿಲ್ಲ. ಆದರೆ ಕೆಲಸದ ಯೋಗ್ಯತೆಯ ಮೇಲೆ ಮತ್ತು ಪ್ರಮಾಣದ ಮೇಲೆ ಅವಲಂಬಿಸುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ತಾವು ಹೇಳಿದ ಪ್ರಕಾರ 10 ಸಾವಿರ ಎಕರೆ ನೀರಾವರಿಗೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಬೇಕಾಗುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹತ್ತು ಸಾವಿರ ಎಕರೆ ನೀರಾವರಿಯ ಮೇಲ್ವಿಚಾರಣೆ ನೋಡಿಕೊಳ್ಳುವುದಷ್ಟೇ ಅಲ್ಲ. ಮಾರ್ಕೋನಹಳ್ಳಿ ದೊಡ್ಡ ಪ್ರಾಜೆಕ್ಟ್. ಅಲ್ಲಿ ಮೂರು ತರಹ ಸ್ಯೆಫನ್‌ಗಳಿವೆ. ಸ್ವಲ್ಪ ಹೆಚ್ಚು ಕಡಿಮೆ ಮಾಡಿದ ಪಕ್ಷದಲ್ಲಿ ಜನಗಳಿಗೆ ಬಹಳ ನಷ್ಟವಾಗುತ್ತದೆ. ಇದರ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳಬೇಕು. ಮತ್ತು Channel Work ಮತ್ತು distributaries ಕೆಲಸಗಳನ್ನೂ ನೋಡಿಕೊಳ್ಳಬೇಕು. ಜೊತೆಗೆ ಮಂಗಳ ಪ್ರಾಜೆಕ್ಟ್ ಕೆಲಸ ಕಾರ್ಯಗಳನ್ನೂ ನೋಡಿಕೊಳ್ಳಬೇಕು.

ಶ್ರೀ ಬಿ. ಹುಚ್ಚೇಗೌಡ.—ಒಬ್ಬ ಅಸಿಸ್ಟೆಂಟ್ ಇಂಜಿನಿಯರಿಗೆ ಮತ್ತು ಅವರ ಆಫೀಸಿಗೆ 20 ಸಾವಿರ ರೂಪಾಯಿಗಳವರೆಗೂ ಖರ್ಚು ಮಾಡಿ ಒಂದೂವರೆ ಲಕ್ಷ ರೂಪಾಯಿಗಳ outlay ಆದರೆ ಸಾಕೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾರ್ಮಲ್ ನಬ್ ಡಿವಿಷ್‌ನಲ್ಲಿ ಬರೀ ರಸ್ತೆಗಳ ಕೆಲಸ, ಕಟ್ಟಡ ಗಳನ್ನು ಕಟ್ಟತಕ್ಕದ್ದು, ಇವು ಮಾತ್ರ ಬರುತ್ತವೆ. ಇರಿಗೇಷ್ಷ್ ನಬ್‌ಡಿವಿಷ್‌ನಲ್ಲಿ ಬೇರೊಂದು ವಿಧದಲ್ಲಿ ಕೆಲಸ ಎಷ್ಟೆಷ್ಟು ಇರಬೇಕು ಎಂದು ನಿರ್ಧರ ಮಾಡು ತ್ತೇವೆ. Outlay incur ಮಾಡುವುದರ ಮೇಲೆ ಇರಿ ಗೇಷ್ಷ್ ನಬ್‌ಡಿವಿಷ್ಷ್ ಕೆಲಸ ಮಾಡತಕ್ಕದ್ದು ನರಿಯಲ್ಲ.

12-30 P. M.

ಶ್ರೀ ಬಿ. ಹುಚ್ಚೇಗೌಡ.—ಔಟ್‌ಲೆ ನಿರ್ಧಾರ ವಾದರೆ ಏರಿಯಾ ನಿರ್ಧಾರವಾಗುವುದಿಲ್ಲ. They provide an Assistant Engineer for every 10,000 acres.

Sri H. M. CHANNABASAPPA.—The Assistant Engineer has got to go through all the channel areas and see that water is equitably distributed and that one does not expolit the other. Supervision by a responsible officer over irrigation project is very essential; otherwise, if any thing goes wrong, Hon'ble Member will complain here.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಆ ಸ್ಥಳದ ಮಹತ್ತಿನ ಮೇಲೆ ಬಿಟ್ಟಿದ್ದೀರೆಂದು ಕಾಣುತ್ತದೆ ?

Sri H. M. CHANNABASAPPA.—Hon'ble Member may draw his own inference.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ತಿಂಗಳು ತಿಂಗಳಿಗೂ ಸಿಬ್ಬಂದಿ ಖರ್ಚು ವ್ಯತ್ಯಾಸವಾಗಲು ಕಾರಣ ವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತಪಶೀಲು ನನ್ನ ಮುಂದಿಲ್ಲ. ಟಿ. ಎ. ವ್ಯತ್ಯಾಸವಾಗಬಹುದು, ವರ್ಗ ವಾಗಿ ಬರೆದಿದ್ದರೆ ಥಾರ್ಜ್ ಆಗುವುದಿಲ್ಲ. ಇನ್ನೂ ನಾನಾ ಕಾರಣಗಳಿರುತ್ತವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಬೆಂಗಳೂರಿ ನಿಂದ ಹೋಗುವವರ ವಿಚಾರವಲ್ಲದೆ ಅಂದಾಜಿನ ಮೇಲೆ ಅಲ್ಲಿರುವ ಸಿಬ್ಬಂದಿಗೇಕೆ ವ್ಯತ್ಯಾಸವಾಗುತ್ತ ದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತಪಶೀಲನ್ನು ಮುಂಚೆ ಕೇಳಿದ್ದರೆ ಒದಗಿಸುತ್ತಿದ್ದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಯಾವಾಗ ಸಿಬ್ಬಂದಿಗೆ ಇಷ್ಟು ಖರ್ಚಾಗಿದೆಯೆಂದು ಹೇಳುತ್ತೀರೋ ಆಗ ಅದು ಬದಲಾವಣೆಯಾಗುವುದಕ್ಕೆ ಕಾರಣ ಹೇಳು ವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೊಂದು ವೇಳೆ ಯಾರಾದರೂ ಅಧಿಕಾರಿಗಳನ್ನು ವರ್ಗ ಮಾಡಿರ ಬಹುದು. ಆ ಕಾಲದಲ್ಲಿ ಥಾರ್ಜ್ ಆಗುವುದಿಲ್ಲ. ಬಂದಮೇಲೆ ಪುನಃ ಹೆಚ್ಚಾಗುತ್ತದೆ. ಇದೂ ಒಂದು ಕಾರಣ. ವಿಚಾರಮಾಡಿ ನರಿಯಾಗಿ ಹೇಳಬಹುದು.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—11,867 ರೂಪಾಯಿ ಕೆಲಸವಾಗಿರುವಾಗ ಸಿಬ್ಬಂದಿಗೆ 1,666 ರೂಪಾಯಿ ಖರ್ಚಾಗಿದೆ. 20,745ರೂಪಾಯಿ ಕೆಲಸಕ್ಕೆ 1,381 ರೂಪಾಯಿ ಸಿಬ್ಬಂದಿ ಖರ್ಚಾಗಿದೆ. ಕಡಮೆ ಕೆಲಸವಾದಾಗ ಸಿಬ್ಬಂದಿ ಖರ್ಚು ಜಾಸ್ತಿ ಯಾಗಿ ಜಾಸ್ತಿ ಕೆಲಸವಾದಾಗ ಸಿಬ್ಬಂದಿ ಖರ್ಚು ಕಡಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸಕ್ಕೂ ಸಿಬ್ಬಂದಿ ಖರ್ಚಿಗೂ ಸಂಬಂಧವಿಲ್ಲ. ಒಂದು ತಿಂಗಳು ಹೆಚ್ಚಿನ ಔಟ್‌ಲೇ ಆಗಬಹುದು. ಇನ್ನೊಂದು ತಿಂಗಳು ಮಳೆ ಬಂದು ಕೆಲಸ ನಡೆಯದೇ ಹೋಗಬಹುದು. ಆದ್ದರಿಂದ ಸಿಬ್ಬಂದಿ ವಜಾ ಮಾಡುವುದಕ್ಕಾಗುವು ದಿಲ್ಲ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಹಾಗಾದರೆ ಇಷ್ಟು ಸಿಬ್ಬಂದಿಗೆ ಖರ್ಚಾದರೆ ಇಷ್ಟು ಕೆಲಸವಾಗ ಬೇಕೆಂಬ ಗುರಿ ಇಲ್ಲವೆ ?

ಶ್ರೀ ಎಂ. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ನಾವು ಒಂದೊಂದು ಡಿವಿಜ್‌ನಲ್ಲಿ ಎಷ್ಟು ಕೆಲಸವಾಗ ಬೇಕೆಂಬುದನ್ನು ನೋಡಿ ನಿರ್ಧಾರ ಮಾಡಿರುತ್ತೇವೆ. ಅದು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳ ಲಾಗುತ್ತದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಆಯಾ ತಿಂಗ ಳಲ್ಲಿ ಎಷ್ಟು ಪರ್ಸೆಂಟೇಜ್ ವರ್ಕ್‌ಔಟ್ ಆಗಿದೆಯೆಂದು ಲೆಕ್ಕ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟಾಗಿದೆಯೆಂಬ ಅಂಕಿ ಅಂಶ ತಮ್ಮ ಮುಂದೇ ಇದೆ.

Hindi as Official Language.
(steps taken to enforce)

Q.—286. Sri P. R. RAMAIYA (Basavangudi).—

Will the Government be pleased to state :—

(*a*) what are the steps they have taken to expedite the use of Hindi as an official language in the State of Mysore ;

(*b*) if they intend making it compulsory in the educational system of the State from the Primary stage to the University stage ?

A.—Sri A. G. RAMACHANDRA RAO (Minister for Law and Education).—

(*a*) No steps are yet taken as the question of making Hindi the official language is pending consideration and decision by the Government of India on the report of the Official Language Commission.

(*b*) Hindi has already been introduced as a compulsory non-public examination subject to the High School stage of education. A new curriculum for the 8 year primary course has been prepared in draft form. The study of Hindi from VII class has been included in the curriculum.

ಶ್ರೀ ಪಿ. ಆರ್. ರಾಮಯ್ಯ.—ಹಿಂದಿಯನ್ನು ಸರ್ಕಾರಿ ಅಡಳಿತ ಭಾಷೆಯಾಗಿ ಯಾವ ವರ್ಷದಿಂದ ಉಪಕ್ರಮಿಸಬೇಕೆಂದಿದೆ ?